‘ಮಹಾನದಿಯ ಹರಿವಿನ ಗುಂಟ’ ಎಂಬ ಪ್ರವಾಸ ಕಥನ, ‘ಕನಸ ಬೆನ್ನತ್ತಿ ನಡಿಗೆ’ ಎಂಬ ಕವನ ಸಂಕಲನ ಮತ್ತು ‘ಹೊಲ ಅಪ್ಪ ಮತ್ತು ನಾನು’ ಎನ್ನುವ ಲೇಖನ ಸಂಗ್ರಹವನ್ನು ಪ್ರಕಟಿಸಿರುವ ಸಿದ್ದು ಸತ್ಯಣ್ಣವರ ಧಾರವಾಡದಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದವರು. ಪ್ರಸ್ತುತ ತಮ್ಮೂರು ಗದಗದ ಡಂಬಳಕ್ಕೆ ಮರಳಿ, ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

ಪ್ರಾಥಮಿಕ ಸಾಲಿ ಮಾಸ್ತರಿಕೆ ನೌಕರಿಯನ್ನ, ಧಾರವಾಡಕ್ಕೆ ವರ್ಗ ಮಾಡಿಸಿಕೊಂಡು ಬಂದಿದ್ದ. ಅಂಥಾದ್ದರಲ್ಲಿ ಪಿತ್ರಾರ್ಜಿತ ಆಸ್ತಿ ಮಾರಿದ್ದ ಇಡುಗಂಟೆಲ್ಲ ಬುಳ್ಳಪ್ಪನ ಸಂಸಾರಕ್ಕೊಂದು ಸೂರು ಮಾಡಿ, ತಲೆ ಮೇಲೊಂದು ಚಾಟು ಮಾಡಿತ್ತು. ಆ ಮನೆ ಕೊಳ್ಳುವಾಗ ಬುಳ್ಳಪ್ಪನ ಕಣ್ಣಲಿ ಬಲು ಮೋಹದ ಕಡಲು. ಹೆಂಡತಿ ಸತ್ತ ಮೇಲೆ ನಗುವಿನ ಪರಿಚಯವೇ ಇಲ್ಲದೋರಂತಿದ್ದ ಬುಳ್ಳಪ್ಪ ಈ ಮನೆಗೆ ಬಂದ ಮೇಲೆ ಸುಧಾರಿಸಿದ್ದ. ಬರೋಬ್ಬರಿ ಎರಡು ಸಂಸಾರ ಆರಾಮವಾಗಿರಬಹುದಾದಷ್ಟು ವಿಶಾಲ ಮನೆ ಅದು. ವಿದುರನಾಗಿದ್ದಾತನಿಗೆ ತಿಮ್ಮಣ್ಣ ಒಬ್ಬನೇ ಮಗ. ಹೊಸ ಮನೆಗೆ ಬಂದಾಗ ತಿಮ್ಮಣ್ಣನದು ಇನ್ನೂ ಕುಂಟಾಬಿಲ್ಲೆ ಆಡೋ ವಯಸ್ಸು. ಆ ಆಲದ ಗಿಡ ನೋಡ್ತಲೇ ಬೆಳೆದ ತಿಮ್ಮಣ್ಣನಿಗೆ ಅದರ ಬಿಳಲು ಬಳಸಿ ಆಡಿದ ಜೋಕಾಲಿ, ಅದರ ನೆರಳಿನ ಬುಡದಲಿ ಆಡಿದ ನೂರೆಂಟು ನಮೂನೆಯ ಆಟಗಳು ವಯಸ್ಸಿಗೆ ಬಂದ ಮೇಲೂ ಆತನೊಳಗೆ ಮನೆ ಮಾಡಿಕೊಂಡಿದ್ದವು. ಹತ್ತು ಹನ್ನೆರಡು ವರ್ಷದ ಆ ನೆನಪುಗಳೊಳಗೆ ತಿಮ್ಮಣ್ಣ ದಿನಾಲೂ ಮಿಂದೇಳುತ್ತಿದ್ದ. ವಯಸ್ಸಾಗಿದ್ದ ಬುಳ್ಳಪ್ಪ ಈಗ್ಗೆ ಆರು ತಿಂಗಳ ಹಿಂದೆ ಮಕ್ಕೊಂಡಾಂವ ಏಳಲೇ ಇಲ್ಲ. ಹೃದಯಾಘಾತ ದೇಹದೊಳಗಿನ ಪ್ರಾಣಪಕ್ಷಿಯನ್ನು ಹಾರಿಸಿಕೊಂಡು ಹೋಗಿತ್ತು. ಆತ ತೀರಿಹೋದ ನಂತರ ಈಚೆಗೆ ತಿಮ್ಮಣ್ಣ ಆಲದ ಮರದ ಕಡೆಗೆ ನೆಟ್ಟಕಣ್ಣು ನೆಟ್ಟೋರಂಗ ಇರಹತ್ತಿದ್ದ. ಹಾಗೇ ದಿಟ್ಟಿಸೋದನ್ನು ತನಗೆ ಗೊತ್ತಿಲ್ಲದಂಗೆ ಆತ ರೂಢಿಸಿಕೊಂಡನೇನೋ? ಅಥವಾ ದಿನಾ ದಿನಾ ಅದನ್ನ ಮಾಡಿದ್ದರಿಂದ ಅದು ಆತನೊಳಗೆ ಗೀಳಾಗಿ ಮಾರ್ಪಾಟಾಗಿತ್ತೋ ಏನೋ? ಅವ್ವ ಇಲ್ಲವಾದಾಗಿಂದಲೂ ನೆರೆ-ಹೊರೆ ಇಲ್ಲದೋರಂತೆ ಬೆಳೆದ ತಿಮ್ಮಣ್ಣ ಪ್ರೀತಿಯಿಂದ ಕಾಣ್ತಿದ್ದ ಅಪ್ಪನು ಇಲ್ಲವಾದ ದುಃಖ ಒತ್ತರಿಸಿ ಬಂದಾಗೆಲ್ಲಾ ಬಾಲ್ಕನಿಗೆ ಬಂದು ನಿಂತರೆ ಆಲದ ಮರ ಮೊದಲು ಆತನ ಕಣ್ಣಿಗೆ ಬೀಳುತ್ತಿತ್ತು.

ತಿಮ್ಮಣ್ಣ ಬಾಲ್ಕನಿಯೊಳಗೆ ಹಾಗೇ ಬಂದು ನಿಂತಾಗೆಲ್ಲಾ ಆತನ ಗಮನ ಮರದೊಳಗೆ ಚೂರು ಮೇಲಕ್ಕಿದ್ದ ಆ ಒಣಗಿದ ಕೊಂಬಿಯ ಮೇಲೆ ಕೇಂದ್ರೀಕೃತವಾಗಿರುತ್ತಿತ್ತು. ಬಹುಶಃ ಆ ಟೊಂಗಿಯೊಳಗೆ ಒಂದೂ ಎಲೆ ಇಲ್ಲದ್ದಕ್ಕೆ ಹಾಗಾಗುತ್ತಿದ್ದಿರಬೇಕು. ಆದರೆ ತಿಮ್ಮಣ್ಣ ಬೇಕಂತಲೇ ತನ್ನ ಗಮನ ಪೂರ್ತಿ ಬೇರೆ ಕಡೆ ಹೊರಳಿಸುತ್ತಿದ್ದ. ಮರದ ನೆರಳು ಬಸ್ಸುಗಳಿಂದ ಇಳಿದ ಪ್ರಯಾಣಿಕರ ಮೈಮೇಲೆಲ್ಲ ಪೂರ್ತಿ ಬೀಳೋದು. ಯಾವುದೇ ಬಸ್ಸು ಬರಲಿ, ಹೋಗಲಿ ತಿಮ್ಮಣ್ಣನ ಕಣ್ಣು ಚಿತ್ತದ ಜೊತೆ ಕೂಡಿ ಬಸ್ಸಿಂದ ಇಳಿಯುವವರು ಮತ್ತು ಹತ್ತುವವರ ಮೇಲೆಯೇ ಗಮನ ಇಟ್ಟಿರುತ್ತಿದ್ದವು.

ಅಪ್ಪ ಸತ್ತ ನಂತರ ತಿಮ್ಮಣ್ಣ ಮುಂಜಾಲೇ ಬ್ರೆಡ್ಡು-ಜಾಮು, ಮಧ್ಯಾಹ್ನ ಮತ್ತು ರಾತ್ರಿಗೆ ಇಪ್ಪತ್ತು ರೂಪಾಯಿ ಕೊಟ್ಟು ಬಿಸ್ಮಿಲ್ಲಜ್ಜನ ತಳ್ಳುಗಾಡಿಯ ಡಬರಿಯೊಳಗೆ ಮಾಡಿಟ್ಟಿರುತ್ತಿದ್ದ ಎಗ್ರೈಸ್ ಅನ್ನು, ಮಾತಾಡಲಾರದಂತೆ ಕೈಸನ್ನೆ ತೋರಿಸಿಯೇ ತಂದು ಇಟ್ಟುಕೊಂಡಿರುತ್ತಿದ್ದ. ಆರು ತಿಂಗಳಿಂದ ಇದೇ ನಡೆದಿದ್ದರಿಂದ ದಿನದಿಂದ ದಿನಕ್ಕೆ ಕೃಶನಾಗಿದ್ದ.

ಈಗೀಗಂತೂ ಯಾವ ಗೊಡವೆಯೂ ಬೇಡವಾದವರಂತೆ, ಏನೂ ಗೊತ್ತಿಲ್ಲದೋರ ಥರ ತಿಮ್ಮಣ್ಣನಿಗೆ ಆಲದ ಗಿಡ ನೋಡುವುದೇ ಕೆಲಸ ಆಗಿತ್ತು. ಸುಮಾರು ದಿನಗಳಿಂದ ಮನೆಯಿಂದ ಆಚೆ ಹೋಗಲಾರದವನು ಸೀದಾ ಬಾಲ್ಕನಿಯಲಿ ಒಂದು ಕುರ್ಚಿ ಹಾಕಿಕ್ಕೊಂಡು ಕೂತು ಬಿಡುತ್ತಿದ್ದ. ಆಲದ ಗಿಡ ನೋಡ್ತಾ ನೋಡ್ತಾ, ಗಟ್ಟಿಯಾಗಿ ದಿಟ್ಟಿಸಿಕೊಂಡು ಕೂತಾಗ ಒಮ್ಮೊಮ್ಮೆ ಮೆತ್ತಗೆ ಯಾರಿಗೂ ಕೇಳದಂತೆ ಅಳಲು ಚಾಲೂ ಮಾಡುತ್ತಿದ್ದ. ಯಾವಾಗಾದರೊಮ್ಮೆ ಇವ ಕುಳಿತಾಗ ಮುಂಜಮುಂಜೇಲೆ ರಂಗೋಲಿ ಹಾಕಲು ಅಂಗಳಕ್ಕೆ ಬರುತ್ತಿದ್ದ ವೈಶಾಲಿ ತಿಮ್ಮಣ್ಣನ ಕಡೆ ಇತ್ತಿತ್ತಲಾಗಿ ಕುತೂಹಲದ ಕಣ್ಣೋಟ ಹರಿ ಬಿಡತೊಡಗಿದ್ದಳು. ಒಂದೊಂದು ಸಲ ಅವಳನ್ನು